ದಿನಾಂಕಃ 08-11-2020 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ 5 ನೇ ಪ್ರತಿವಾದಿ ಪರ ಶ್ರೀ ಜಿ ಬಿ ಹೆಚ್ ವಕೀಲರಿಂದಃ

ನನ್ನ ತಾತ ಗವಿಯಪ್ಪರವರನ್ನು ನಾನು ನೋಡಿಲ್ಲ. ಗವಿಯಪ್ಪ 1986 ರಲ್ಲಿ ತೀರಿಹೋಗಿದ್ದಾರೆ. ಅವರಿಗೆ ಇಬ್ಬರು ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು ಅವರುಗಳೆಂದರೆ ಜಯಮ್ಮ, ವೆಂಕಟಮ್ಮ, ತಿಮ್ಮರಾಯಪ್ಪ, ವೆಂಕಟರಮಣಪ್ಪ. ಜಯಮ್ಮರವರಿಗೆ ಒಬ್ಬನೇ ಮಗ ಆತನ ಹೆಸರು ಅನೀಲ್ ಕುಮರ್. ವೆಂಕಟಮ್ಮರವರಿಗೆ ಇಬ್ಬರು ಗಂಡುಮಕ್ಕಳು , ಇಬ್ಬರು ಹೆಣ್ಣು ಮಕ್ಕಳು. ಅವರುಗಳೆಂದರೆ ಜಯರಾಮ , ಹರೀಶ, ಭವಾನಿ ಮತ್ತು ಭಾರತಿ. ಜಯಮ್ಮರವರ ಮಗ ಮತ್ತು ವೆಂಕಟಮ್ಮರವರ ಮಕ್ಕಳು ಬದುಕಿದ್ದಾರೆ. ಅವರನ್ನು ಈ ದಾವೆಯಲ್ಲಿ ಪಾರ್ಟಿ ಮಾಡಿಲ್ಲ.

ನನ್ನ ತಂದೆಯ ತಂದೆ ನನ್ನ ತಾತ ಗವಿಯಪ್ಪರವರಿಗೆ ಎರಡು ಮನೆ, 4 ಅಂಗಡಿಗಳು ಇದ್ದವು. ಸರ್ವೆ ನಂ 18/1 ಬಿ ರಲ್ಲಿ 12 ಗುಂಟೆ, ಸರ್ವೆ ನಂ 45/2 ರಲ್ಲಿ 39 ಗುಂಟೆ, ಸರ್ವೆ ನಂ 43 ರಲ್ಲಿ 1 ಎಕರೆ 19 ಗುಂಟೆ ಜಮಿನುಗಳು ಇದ್ದವು. ಎರಡೂ ಮನೆಗಳ ವಿಸ್ತೀರ್ಣ ಚಕ್ ಬಂದಿ ಹೇಳಲು ಆಗುವುದಿಲ್ಲ. ಸದರಿ ಎರಡೂ ಮನೆಗಳು ಮಧುಗಿರಿಯ ಸರ್ಕಾರಿ ಪ್ರೌಢಶಾಲೆಯ ಮುಂಭಾಗ ಇವೆ. ನೀವು ಯಾವ ಮನೆಯಲ್ಲಿ ವಾಸ ಇದ್ದೀರಿ ಅಂದರೆ ಎಲ್ಲರೂ ಒಂದೇ ಮನೆಯಲ್ಲಿ ವಾಸ ಇದ್ದೆವು ಎಂದು ಹೇಳುತ್ತಾರೆ. ವಾಸ ಇದ್ದ ಮನೆಯ ವಿಸ್ತೀರ್ಣ ಚಕ್ಬಂದಿ ಹೇಳಲು ಆಗುವುದಿಲ್ಲ. ಈಗ ಸದರಿ ಮನೆಯಲ್ಲಿ 1 ನೇ ಪ್ರತಿವಾದಿಯ ಹೆಂಡತಿ ಇದ್ದಾರೆ.

ಎರಡೂ ಮನೆಗಳು ಎದುರುಬದುರು ಇವೆ. ಇನ್ನೊಂದು ಮನೆಯ ವಿಸ್ತೀರ್ಣ ಚಕ್ ಬಂದಿ ಹೇಳಲು ಬರುವುದಿಲ್ಲ. ಸದರಿ ಮನೆ ಈಗ ಬಾಡಿಗೆಗೆ ಕೊಟ್ಟಿದ್ದಾರೆ. 1 ನೇ ಪ್ರತಿವಾದಿ ಬಾಡಿಗೆಗೆ ಕೊಟ್ಟಿದ್ದರು. ಎಷ್ಟು ಬಾಡಿಗೆಗೆ ಕೊಟ್ಟಿದ್ದರು ಮತ್ತು ಯಾರಿಗೆ ಬಾಡಿಗೆ ಕೊಟ್ಟಿದ್ದರು ನನಗೆ ಗೊತ್ತಿಲ್ಲ. ಸುಮಾರು ವರ್ಷಗಳಿಂದ ಬಾಡಿಗೆಗೆ ಕೊಟ್ಟಿದ್ದಾರೆ.

ನನ್ನ ಅಣ್ಣ 1 ನೇ ಪ್ರತಿವಾದಿ ತೀರಿ ಹೋಗಿದ್ದಾರೆ. ಮನೆಯಲ್ಲಿ ಬಾಡಿಗೆಗೆ ಇರುವ ಬಾಡಿಗೆದಾರರನ್ನು ಈ ದಾವೆಯಲ್ಲಿ ಪಾರ್ಟಿ ಮಾಡಿಲ್ಲ. ನನ್ನ ತಂದೆ ತಿಮ್ಮರಾಯಪ್ಪ ಮತ್ತು ನನ್ನ ದೊಡ್ಡಪ್ಪ ವೆಂಕಟರಮಣಪ್ಪ ಜಂಟಿಯಾಗಿದ್ದರು ಮತ್ತು ಒಟ್ಟಾ ವಾಸ ಇದ್ದರು ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿಲ್ಲ. ನನ್ನ ತಂದೆಗೆ ಮತ್ತು ನನ್ನ ದೊಡ್ಡಪ್ಪನಿಗೆ ಪ್ರತ್ಯೇಕವಾಗಿ ಎರಡು ರೇಷನ್ ಕಾರ್ಡ್ ಗಳು ಇದ್ದವು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ತೀರಿಹೋದ ನಂತರ 1 ನೇ ಪ್ರತಿವಾದಿ ಮತ್ತು ಆತ ತೀರಿ ಹೋದ ನಂತರ ಆತನ ಹೆಂಡತಿ ಮಕ್ಕಳು ಪ್ರತ್ಯೇಕ ರೇಷನ್ ಕಾರ್ಡ್ ಮಾಡಿಸಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಸಾಯುವವರೆ ಆತನ ಜೊತೆ ನನಗೆ ಭಿನ್ನಾಭಿಪ್ರಾಯ ಇರಲಿಲ್ಲ ಮತ್ತು ನಮ್ಮ ಸಂಬಂಧ ಚೆನ್ನಾಗಿ ಇತ್ತು.

ಈಗ ನನ್ನ ಅತ್ತಿಗೆ ವಾಸ ಇರುವ ಮನೆಯಲ್ಲಿ ಮುಂಚೆ ನನ್ನ ತಂದೆ ವಾಸ ಆಗಿದ್ದರು. ಮತ್ತು ಇನ್ನೊಂದು ಮನೆಯಲ್ಲಿ ನಮ್ಮ ದೊಡ್ಡಪ್ಪವಾಸ ಆಗಿದ್ದರು ಎಂದರೆ ಸರಿಯಲ್ಲ. ದೊಡ್ಡಪ್ಪ ತೀರಿ ಹೋದ ನಂತರ ಭಾಗ್ಯಮ್ಮ ಸದರಿ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. ಸಾಕ್ಷಿ

ಮುಂದುವರಿದು ನಾವು ಭಾಗ್ಯಮ್ಮ ಒಟ್ಟಿಗೆ ವಾಸ ಇದ್ದೆವು ಎಂದು ಹೇಳುತ್ತಾರೆ. ನಾವು ಮತ್ತು ಭಾಗ್ಯಮ್ಮ ಒಟ್ಟಿಗೆ ವಾಸ ಮಾಡುತ್ತಿದ್ದೆವು ಎಂದು ತೋರಿಸಲು ದಾಖಲಾತಿ ಇದೆ. ಆ ಬಗ್ಗೆ ಮತದಾರ ಯಾದಿ ಮತ್ತು ಪಡಿತರ ಚೀಟಿ ಇದೆ ಅಥವಾ ಇಲ್ಲ ಪರಿಶೀಲಿಸಿ ನೋಡುತ್ತೇನೆ. ಈ ದಾವೆ ಸಲ್ಲಿಸುವ ಮುಂಚೆ ನಾವು ಒಟ್ಟಿಗೆ ಇದ್ದೆವು ಎಂದು ತೋರಿಸಲು ರೇಷನ್ ಕಾರ್ಡ್ ಇದೆ. ನಾವು ಜೊತೆಯಾಗಿ ಇದ್ದ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ.

ನನ್ನ ತಾತ ಗವಿಯಪ್ಪ ಮನೆಯಲ್ಲಿ ತೀರಿ ಹೋದರು. ಭಾಗ್ಯಮ್ಮ ನನ್ನ ದೊಡ್ಡಪ್ಪ ವೆಂಕಟರಮಣಪ್ಪನ ಮಗಳು. ಅವರ ಮದುವೆ ಸುಮಾರು 1968-70 ರಲ್ಲಿ ಆಗಿದೆ. ಅವರು ಒಂದು ವರ್ಷಕ್ಕಿಂತ ಕಡಿಮೆ ಅವಧಿಗೆ ಮಾತ್ರ ಗಂಡನ ಜೊತೆ ಇದ್ದರು. ಅವರನ್ನು ಮಧುಗಿರಿಗೆ ಮದುವೆ ಮಾಡಿ ಕೊಟ್ಟಿದ್ದರು. ಭಾಗ್ಯಮ್ಮ ಅವರಿಗೆ ಆರೋಗ್ಯ ಸರಿ ಇರಲಿಲ್ಲ ಆದರೆ ಬುದ್ದಿ ಚೆನ್ನಾಗಿ ಇತ್ತು ಅವರಿಗೆ ಮಾನಸಿಕ ಕಾಯಿಲೆ ಇರಲಿಲ್ಲ. ಈ ದಾವೆ ತಯಾರಿಸಲು ವಕೀಲರಿಗೆ ನಾವು ಮಾಹಿತಿ ನೀಡಿದ್ದೇವೆ. ನಾನು ವಕೀಲರಿಗೆ ಮಾಹಿತಿ ನೀಡುವಾಗ ಭಾಗ್ಯಮ್ಮ ರವರಿಗೆ ಮಾನಸಿಕ ಅನಾರೋಗ್ಯ ಇತ್ತು ಎಂದು ಹೇಳಿ ಬರೆಸಿಲ್ಲ.

ನನ್ನ ತಾತ ಗವಿಯಪ್ಪನ ತಂದೆ ಹೆಸರು ಅಮೀನ್ ತಿಮ್ಮರಾಯಪ್ಪ. ಅಮೀನ್ ತಿಮ್ಮರಾಯಪ್ಪನಿಗೆ ಯಾವುದೇ ಸ್ವತ್ತುಗಳು ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಎಲ್ಲಾ ದಾವಾ ಸ್ವತ್ತುಗಳು ಅವರಿಗೆ ಸೇರಿದ್ದು ಎಂದು ಹೇಳುತ್ತಾರೆ. ದಾವಾ ಸ್ವತ್ತುಗಳು ಮೊದಲು

ತಿಮ್ಮರಾಯಪ್ಪನಿಗೆ ಸೇರಿತ್ತು ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿದ್ದೇನೆ. ದಾವಾ ಸ್ವತ್ತುಗಳು ಅಮೀನ್ ತಿಮ್ಮರಾಯಪ್ಪನವರ ಹೆಸರಿನಲ್ಲಿ ಇದ್ದ ಬಗ್ಗೆ ನಾನು ದಾಖಲಾತಿಗಳನ್ನು ನೋಡಿದ್ದೇನೆ. ಸರ್ವೆ ನಂ 43 ರಲ್ಲಿ 1 ಎಕರೆ 19 ಗುಂಟೆ ಇದೆ. ಸದರಿ ಜಮೀನು ಗವಿಯಪ್ಪರವರಿಗೆ ಮಂಜೂರಾದ ಜಮೀನು ಎಂದರೆ ಸರಿ. ಸದರಿ ಸ್ವತ್ತು ಗವಿಯಪ್ಪರವರ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅವರ ತಂದೆ ಕಡೆಯಿಂದ ಬಂದ ಸ್ವತ್ತು ಎಂದು ಹೇಳುತ್ತಾರೆ. ದಾವಾ ಮನೆಗಳು ಕೂಡ ಮೊದಲಿಗೆ ಗವಿಯಪ್ಪರವರ ಸ್ವಯಾರ್ಜಿತ ಸ್ವತ್ತುಗಳು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅವು ನನ್ನ ಮುತ್ತಾತನಿಗೆ ಸೇರಿದ್ದವು ಎಂದು ಹೇಳುತ್ತಾರೆ. ನನ್ನ ಮುತ್ತಾತನಿಗೆ ಯಾವುದೇ ಸ್ವತ್ತುಗಳು ಇರಲಿಲ್ಲ ಎಂದರೆ ಸರಿಯಲ್ಲ.

ನಾನು ಬಿ ಎ ಮೊದಲನೇ ವರ್ಷದವರೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನಾನು ದಾವಾ ಸ್ವತ್ತಿಗೆ ಸಂಬಂಧಪಟ್ಟ ದಾಖಲಾತಿಗಳನ್ನು ಓದಿ ತಿಳಿದುಕೊಂಡಿದ್ದೇನೆ. ದಾವಾ ಸ್ವತ್ತುಗಳ ಖಾತೆ ಪಹಣಿ ಯಾರಿಂದ ಯಾರಿಗೆ ಯಾವಾಗ ಹೇಗೆ ಬದಲಾದವು ಎಂದು ತಿಳಿದುಕೊಂಡಿಲ್ಲ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲಾತಿಗಳಲ್ಲಿನ ಬರವಣಿಗೆ ಸರಿಯಾಗಿದೆ. ನಾನು ಹಾಜರು ಪಡಿಸಿರುವ ದಾಖಲಾತಿಗಳನ್ನು ವಕೀಲರಿಗೆ ನಾನು ಮತ್ತು ನನ್ನ ಗಂಡ ತಂದುಕೊಟ್ಟಿದ್ದೇವೆ.

ಸರ್ವೆನಂ 45/2 ರಲ್ಲಿ 39 ಗುಂಟೆ ಇದೆ. ಸದರಿ ಸ್ವತ್ತಿನ ಖಾತೆ ಪಹಣಿ 1980-81 ರಲ್ಲಿ

ನನ್ನ ದೊಡ್ಡಪ್ಪನ ಹೆಸರಿಗೆ ಆಗಿದೆ ಎಂದರೆ ಸಾಕ್ಷಿ ನನ್ನ ತಾತ ಮಾಡಿಸಿದ್ದಾರೆ ಎಂದು ಹೇಳುತ್ತಾರೆ. ಆಗ ನಾನು ಜನಿಸಿರಲ್ಲಿ. 1980–81 ರಲ್ಲಿ ನೊಂದಾಯಿತ ವಿಲ್ ಪ್ರಕಾರ ನನ್ನ ದೊಡ್ಡಪ್ಪನ ಹೆಸರಿಗೆ ಮ್ಯುಟೇಷನ್ ಆಗಿದೆ ಎಂದರೆ ಸರಿ. ನನ್ನ ತಾತ ವಿಲ್ ಬರೆದು ಇಟ್ಟಿದ್ದರು ಅದರಂತೆ ಮ್ಯುಟೇಷನ್ ಆಗಿದೆ. ಅಂದಿನಿಂದ ಇಲ್ಲಿಯವರೆಗೆ ಸದರಿ ಮ್ಯುಟೇಷನನ್ನು ಯಾರೂ ಪ್ರಶ್ನೆ ಮಾಡಿಲ್ಲ ಎಂದರೆ ಸರಿ . ನನ್ನ ದೊಡ್ಡಪ್ಪ ಸದರಿ ಜಮೀನನ್ನು ಅವರ ಮಗಳು ಭಾಗ್ಯಮ್ಮರವರಿಗೆ ನೊಂದಾಯಿತ ವಿಲ್ ಬರೆದು ಇಟ್ಟು ಕೊಟ್ಟಿದ್ದಾರೆ ಎಂದರೆ ಸರಿ. ಸದರಿ ವಿಲ್ ಪ್ರಕಾರ ಭಾಗ್ಯಮ್ಮನ ಹೆಸರಿಗೆ ಖಾತೆ ಪಹಣಿ ಆಗಿದೆ ಎಂದರೆ ಸರಿಯಲ್ಲ. 2015 ರಲ್ಲಿ ಭಾಗ್ಯಮ್ಮ ತೀರಿ ಹೋದರು. ಅವರಿಗೆ ಹೃದಯ ಶಸ್ತ್ರ ಚಿಕಿತ್ಸೆ ಆಗಿತ್ತು, ಅವರಿಗೆ ಅಧಿಕ ರಕ್ತದ ಒತ್ತಡ ಮತ್ತು ಮಧುಮೇಹ ಕಾಯಿಲೆ ಇತ್ತು ಮತ್ತು ಕೊನೆಯಲ್ಲಿ ಅವರ ಮೂತ್ರಪಿಂಡಗಳು ವಿಫಲಗೊಂಡಿದ್ದವು ತತ್ಪರಿಣಾಮ ಅವರು ತೀರಿ ಹೋದರು. ನನ್ನ ದೊಡ್ಡಪ್ಪ ತೀರಿ ಹೋದಾಗಿನಿಂದ ಭಾಗ್ಯಮ್ಮರವರಿಗೆ ಆರೋಗ್ಯ ಸರಿ ಇರಲಿಲ್ಲ. ಅವರು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದರು. ಅವರು ಬೆಂಗಳೂರಿನ ಜಯದೇವ ಆಸ್ಪತ್ರೆಯಲ್ಲಿ ಹೃದಯ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡು ಚಿಕಿತ್ಸೆ ಪಡೆಯುತ್ತಿದ್ದರು. ಅವರು ಆಸ್ಪತ್ರೆ ಸಂಬಂದ ಸಾಕಷ್ಟು ಹಣ ಖರ್ಚು ಮಾಡಿದ್ದರು ಎಂದರೆ ಸರಿಯಲ್ಲ.

ಈ ಮೇಲಿನ ಕಾರಣಗಳಿಂದಾಗಿ ಭಾಗ್ಯಮ್ಮ ಸರ್ವೆ ನಂ 45/2 ರಲ್ಲಿನ 39 ಗುಂಟೆ ಪೈಕಿ 19 ಗುಂಟೆ ಮಂಜುನಾಥರವರಿಗೆ ಮತ್ತು 20 ಗುಂಟೆ ಶೋಭಾರವರಿಗೆ ನೊಂದಾಯಿತ ಕ್ರಯ

ಪತ್ರದ ಮೂಲಕ ಮಾರಾಟ ಮಾಡಿದರು ಎಂದರೆ ಸರಿ. ಸಾಕ್ಷಿ ಮುಂದುವರಿದು ನಮಗೆ ಗೊತ್ತಿಲ್ಲದಂತೆ ಮಾರಾಟ ಮಾಡಿದ್ದಾರೆ ಎಂದು ಹೇಳುತ್ತಾರೆ. ನಾವು ಮತ್ತು ಭಾಗ್ಯಮ್ಮ ಬೇರೆ ಬೇರೆ ವಾಸ ಇದ್ದಿದ್ದರಿಂದ ಅವರ ಮನೆಯ ವ್ಯವಹಾರ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಕ್ರಯದ ನಂತರ ಮಂಜುನಾಥ ಕೊಂಡು ಕೊಂಡ 19 ಗುಂಟೆ ಸ್ವತ್ತು 45/2 ಎಂದು ಮತ್ತು ಶೋಭಾ ಕೊಂಡು ಕೊಂಡ 20 ಗುಂಟೆ 45/3 ಎಂದು ಪೋಡ್ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಭಾಗ್ಯಮ್ಮ ತೀರಿ ಹೋದನಂತರ ದಾಖಲಾತಿಗಳನ್ನು ನೋಡಿದಾಗ ಈ ಸಂಗತಿಗಳು ನಮಗೆ ಗೊತ್ತಾಗಿದೆ. ಶೋಭಾರವರು 10 ಗುಂಟೆ ಸ್ವತ್ತನ್ನು 5 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅದರ ಪ್ರಕಾರ ಸದರಿ 10 ಗುಂಟೆ ಸ್ವತ್ತಿಗೆ ಪ್ರತ್ಯೇಕ ಪೋಡ್ ಆಗಿದೆ ಎಂದರೆ ಸಾಕ್ಷಿ ಭಾಗ್ಯಮ್ಮ ತೀರಿ ಹೋದ ನಂತರ ಈ ಎಲ್ಲಾ ಸಂಗತಿಗಳು ಗೊತ್ತಾಗಿದೆ ಎಂದು ಹೇಳುತಾರೆ.

2011 ರಲ್ಲಿ 5 ನೇಪ್ರತಿವಾದಿ ಸದರಿ 10 ಗುಂಟೆ ಸ್ವತ್ತನ್ನು ಅನ್ಯಸಂಕ್ರಮಣ ಮಾಡಿಸಿ ಅದರಲ್ಲಿ ಶಾಲಾ ಕಟ್ಟಡ ಕಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆ ಸಲ್ಲಿಸುವಾಗ 5 ನೇ ಪ್ರತಿವಾದಿ ಕೊಂಡು ಕೊಂಡ 10 ಗುಂಟೆ ಸ್ವತ್ತನ್ನು ಪ್ರತ್ಯೇಕ ದಾವಾ ಸ್ವತ್ತು ಎಂದು ತೋರಿಸಿಲ್ಲ. ಸಾಕ್ಷಿ ಮುಂದುವರಿದು ಪೂರ್ಣ 39 ಗುಂಟೆಯನ್ನು ದಾವಾ ಸ್ವತ್ತು ಎಂದು ತೋರಿಸಿದ್ದೇವೆ ಎಂದು ಹೇಳುತ್ತಾರೆ. 5 ನೇ ಪ್ರತಿವಾದಿ 10 ಗುಂಟೆ ಸ್ವತ್ತನ್ನು ಕೊಂಡು ಕೊಂಡ ಸಂಗತಿ ದಾಖಲೆಗಳಿಂದ ಗೊತ್ತಾದ ಕಾರಣ ಅವರನ್ನು ಈ ದಾವೆಯಲ್ಲಿ ಪಾರ್ಟಿ ಮಾಡಿದ್ದೇವೆ. 5 ನೇ ಪ್ರತಿವಾದಿಗೆ

ಬಂದಿರು 10 ಗುಂಟೆ ಸ್ವತ್ತನ್ನು ನಾನು ನೋಡಿದ್ದೇನೆ. ನಾನು ಈ ದಾವೆಯಲ್ಲಿ ನ್ಯಾಯಾಲಯಕ್ಕೆ ಬರುವಾಗ ಹೋಗುವಾಗ ಸದರಿ ಸ್ವತ್ತನ್ನು ನೋಡುತ್ತಿರುತ್ತೇನೆ. ಸದರಿ ಸ್ವತ್ತಿನಲ್ಲಿ ಶಾಲಾ ಕಟ್ಟಡ ಕಟ್ಟಿ ಚೇತನಾ ಶಾಲೆ ಎಂಬ ಹೆಸರಿನಲ್ಲಿ ಶಾಲೆ ನಡೆಸುತ್ತಿದ್ದಾರೆ ಎಂದರೆ ಸರಿ. 2011 ರಿಂದ ಆ ರೀತಿ ಶಾಲೆ ನಡೆದಿದೆ ಎಂದರೆ ನನಗೆ ಗೊತ್ತಿಲ್ಲ. 2016 ರಲ್ಲಿ ದಾವೆ ಸಲ್ಲಿಸುವಾಗ ಸದರಿ ಸ್ಥಳಕ್ಕೆ ಹೋಗಿ ಸ್ಥಳ ಪರಿಶೀಲನೆ ಮಾಡಿಲ್ಲ. ಸದರಿ Building ಯಾವ ವರ್ಷ ಕಟ್ಟಿದ್ದಾರೆ ಎಂದು ಪುರಸಭೆಯಲ್ಲಿ ಪರಿಶೀಲನೆ ಮಾಡಿಲ್ಲ. 2011 ರಿಂದ ಅಲ್ಲಿ ಕಟ್ಟಡ ಇದೆ ಎಂದರೆ ನನಗೆ ಗೊತ್ತಿಲ್ಲ. ಯಾವ ವರ್ಷದಿಂದ ಶಾಲೆ ಆರಂಭವಾಗಿದೆ ನನಗೆ ಗೊತ್ತಿಲ್ಲ. 2016 ರಲ್ಲಿ ಈ ದಾವೆ ಸಲ್ಲಿಸಿದ ನಂತರ ಸದರಿ ಕಟ್ಟಡ ಇರುವ ಬಗ್ಗೆ ನನಗೆ ಗೊತ್ತಾಗಿದೆ. 5 ನೇ ಪ್ರತಿವಾದಿ ಕೊಂಡಿರುವ 10 ಗುಂಟೆ ಸ್ವತ್ತಿಗೆ ಚಕ್ ಬಂದಿ ಹೇಳಲು ಬರುವುದಿಲ್ಲ. ಅದೇ ರೀತಿ ಮಂಜುನಾಥ ಮತ್ತು ಶೋಭಾರವರು ಕೊಂಡಿರುವ ಸ್ವತ್ತುಗಳ ಚಕ್ ಬಂದಿ ಹೇಳಲು ಆಗುವುದಿಲ್ಲ.

ನಾನು ದಾವೆ ಸಲ್ಲಿಸುವಾಗ ಸರ್ವೆ ನಂ 45/2 ವಿಸ್ತೀರ್ಣ 39 ಗುಂಟೆಗೆ ಈ ದಾವೆ ಸಲ್ಲಿಸಿದ್ದೇನೆ. ಕ್ರಯ ಪತ್ರದಲ್ಲಿರುವ ಚಕ್ ಬಂದಿಗಳನ್ನೇ ನಮೂದಿಸಿದ್ದೇವೆ . ಈ ದಾವೆ ಸಲ್ಲಿಸುವ ಮುಂಚೆ ಮಂಜೂನಾಥ, ಶೋಭಾ ಮತ್ತು 5 ನೇ ಪ್ರತಿವಾದಿಯನ್ನು ಭೇಟಿ ಮಾಡಿ ವಿಚಾರಿಸಿಲ್ಲ. ನಾನು ಈ ದಾವೆ ಸಲ್ಲಿಸುವಾಗ ದಾವಾ ಸ್ವತ್ತುಗಳ ಪಹಣಿಗಳನ್ನು ಹಾಜರುಪಡಿಸಿದ್ದೇನೆ. ಈ ದಾವೆ ಸಲ್ಲಿಸುವ ಕಾಲಕ್ಕೆ ಸರ್ವೆ ನಂ 45 ಪೋಡಾಗಿ ಸರ್ವೆ ನಂ 45/2 ರಲ್ಲಿನ ಜಮೀನು ಭೂಪರಿವರ್ತನೆಗೊಂಡಿತ್ತು ಎಂದರೆ ನನಗೆ ಗೊತ್ತಿಲ್ಲ. ನಾನು ದಾವೆ

ಸಲ್ಲಿಸಬೇಕಾದರೆ 2016 ರ ಪಹಣಿಗಳನ್ನು ಹಾಜರುಪಡಿಸದೆ ಹಳೆಯ ವರ್ಷದ ಪಹಣಿಗಳನ್ನು ಹಾಜರುಪಡಿಸಿದ್ದೇವೆ ಎಂದರೆ ಸರಿಯಲ್ಲ. ಈ ದಾವೆ ಸಲ್ಲಿಸುವ ಕಾಲಕ್ಕೆ ಸರ್ವೆ ನಂ 45/2, 45/3, ಮತ್ತು 45/4 ರಲ್ಲಿನ ಸ್ವತ್ತುಗಳು ವ್ಯವಸಾಯ ಜಮೀನುಗಳು ಆಗಿ ಉಳಿಯದೆ ಭೂಪರಿವರ್ತನೆ ಆಗಿ ವ್ಯವಸಾಯೇತರ ಉದ್ದೇಶಕ್ಕೆ ಪರಿವರ್ತನೆ ಮಾಡಲಾಗಿತ್ತು ಎಂದರೆ ಸರಿ. ಕಾರಣ ಈ ಹಿಂದಿನ ಸರ್ವೆ ನಂಬರುಗಳನ್ನು ತೋರಿಸಿ ಸಲ್ಲಿಸಿರುವ ದಾವೆ ಊರ್ಜಿತವಲ್ಲ ಎಂದರೆ ಸರಿಯಲ್ಲ.

ಭಾಗ್ಯಮ್ಮ ತನ್ನ ವೈದ್ಯಕೀಯ ಖರ್ಚು ಭರಿಸುವ ಸಲುವಾಗ ಮತ್ತು ತನ್ನ ಅವಶ್ಯಕತೆಗಾಗಿ ಸರ್ವೆ ನಂ 45/2 ರಲ್ಲಿನ ಸ್ವತ್ತನ್ನು ಮಂಜುನಾಥ್ ಮತ್ತು ಶೋಭಾರವರಿಗೆ ಮಾರಾಟ ಮಾಡಿದ್ದು ಸದರಿ ಮಾರಾಟವನ್ನು ಪ್ರಶ್ನಿಸುವ ಹಕ್ಕು ನಮಗೆ ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ದೊಡ್ಡಪ್ಪ ಯಾವಾಗಲೋ ವಿಭಾಗ ಆಗಿದ್ದರು ಕಾರಣ ಅವರ ಜೀವಿತ ಅವಧಿಯಲ್ಲಿ ಅವರ ನಡುವೆ ಒಟ್ಟು ಕುಟುಂಬ ಅಸ್ತಿತ್ವದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. 1987 ರಲ್ಲಿ ನನ್ನ ತಂದೆ ಮತ್ತು ದೊಡ್ಡಪ್ಪ ಎರಡೂ ಮನೆಗಳನ್ನು ತಲಾ ಒಂದೊಂದು ಭಾಗ ಮಾಡಿಕೊಂಡರು ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ದೊಡ್ಡಪ್ಪನಿಗೆ ಯಾವುದೇ ಪಿತ್ರಾರ್ಜಿತ ಸ್ವತ್ತುಗಳು ಇರಲಿಲ್ಲ, ಅವರ ತಂದೆಯಿಂದ ಬಂದ ಎರಡು ಮನೆಗಳು ಮಾತ್ರ ಇದ್ದವು ಎಂದರೆ ಸರಿಯಲ್ಲ 1987 ರಲ್ಲಿ ನನ್ನ ತಂದೆ ಮತ್ತು ದೊಡ್ಡಪ್ಪ ಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ವಿಭಾಗದ ಪ್ರಕಾರ ಮನೆಗಳ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಈ ಎಲ್ಲಾ ಸಂಗತಿಗಳು ಗೊತ್ತಿದ್ದರೂ

ಅವರಿವರ ಮಾತು ಕೇಳಿಕೊಂಡು ಈ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ನಾನು ಈ ದಾವೆ ಸಲ್ಲಿಸುವ ಮುಂಚೆ ನಾನು ಮತ್ತು 1 ನೇ ಪ್ರತಿವಾದಿ 5 ನೇ ಪ್ರತಿವಾದಿಯನ್ನು ಭೇಟಿ ಆಗಿ ಹಣ ಕೊಡಿ ಇಲ್ಲವಾದರೆ ದಾವೆ ಸಲ್ಲಿಸುತ್ತೇವೆ ಎಂದು ಹೇಳಿದ್ದೆ ಎಂದರೆ ಸರಿಯಲ್ಲ. ನಾನು 1 ನೇ ಪ್ರತಿವಾದಿ ಷರೀಕಾಗಿ ಈ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ನಾನು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ

ಮರು ವಿಚಾರಣೆ ಇಲ್ಲ.

(ತೆ. ನ್ಯಾ.ನ. ಉ. ಲೇ. ಬೆ. ಮಾ.)                ಓ.ಹೇ.ಕೇ. ಸ.ಇ.

ಅಧಿಕ ಹಿರಿಯ ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ
ಮಧುಗಿರಿ .